



## ಜಲಪಾತ ವೀಕ್ಷಣೆಗೆ ಗಾಜಿನ ಸ್ಕೈ ವಾಕ್

ಧುಮ್ಮಿಕ್ಕುವ ಜಲಪಾತದ ಬೆಳ್ನೊರೆಯ ನದಿ ನೀರ ಮೇಲೆ ಗಾಜಿನ ಸೇತುವೆಯಲ್ಲಿ ಹೆಜ್ಜೆಯಿಡುತ್ತಾ ಪ್ರಕೃತಿ ಸೌಂದರ್ಯವನ್ನು ಆಸ್ವಾದಿಸುವ ಕನಸನ್ನು ಮಹಾರಾಷ್ಟ್ರದಲ್ಲೀಗ ನನಸಾಗಿಸಬಹುದಾಗಿದೆ.

ಮಹಾರಾಷ್ಟ್ರದ ಸಿಂಧುದುರ್ಗ ಜಿಲ್ಲೆಯ ವೈಭವವಾಡಿ ತಾಲ್ಲೂಕಿನ 'ನಾಪ್ಣೆ ಜಲಪಾತ'ದ ಮೇಲೆ ರಾಜ್ಯದ ಮೊದಲ, ಸುಂದರ ಗಾಜಿನ ಸೇತುವೆ (ಸ್ಕೈವಾಕ್) ಸ್ಥಾಪಿಸಲಾಗಿದೆ. ಈಚೆಗೆ ಉದ್ಘಾಟನೆಯಾಗಿದ್ದು, ಕೊಂಕಣ ಪ್ರದೇಶದ ಪ್ರವಾಸೋದ್ಯಮಕ್ಕೆ ವಿಶಿಷ್ಟ ಆಕರ್ಷಣೆ ತಂದಿದೆ. ಸುಮಾರು 1ಕೋಟಿ ರೂಪಾಯಿ ವೆಚ್ಚದಲ್ಲಿ 22 ಮೀಟರ್ ಉದ್ದದ ಈ ಸೇತುವೆಯನ್ನು 'ಸಿಂಧುರತ್ನ ಪ್ರವಾಸೋದ್ಯಮ ಪ್ರಚಾರ ಯೋಜನೆ'ಯಡಿ ನಿರ್ಮಿಸಲಾಗಿದೆ. ಇದನ್ನು ವಿಪರೀತ ಹವಾಮಾನ ಪರಿಸ್ಥಿತಿ ಮತ್ತು ಹೆಚ್ಚು ಭಾರ ತಡೆದುಕೊಳ್ಳುವ ಟೆಂಪರ್ಡ್ ಗ್ಲಾಸ್‌ನಿಂದ ವಿನ್ಯಾಸಗೊಳಿಸಲಾಗಿದೆ. ವರ್ಷವಿಡೀ ಹರಿಯುವ ನಾಪ್ಣೆ ಜಲಪಾತದ ನೈಸರ್ಗಿಕ ಸೌಂದರ್ಯವನ್ನು ಪ್ರವಾಸಿಗರು ಸುರಕ್ಷಿತವಾಗಿ, ಸನಿಹದಿಂದ ಆಸ್ವಾದಿಸಲು ಇದರಿಂದ ಸಾಧ್ಯವಾಗಿದೆ.



ಹಚ್ಚ ಹಸುರಿನ ಕಾನನದ ನಡುವೆ ಶೋಭಿಸುವ ನಾಪ್ಣೆ ಜಲಪಾತ ಮಳೆಗಾಲದಲ್ಲಿ ಮೈದುಂಬಿ ಹರಿಯುವುದರಿಂದ ಅದರ ಸಮೀಪಕ್ಕೆ ಹೋಗುವುದು ಅಪಾಯಕಾರಿಯಾಗಿತ್ತು. ಈ ಸಮಸ್ಯೆಯನ್ನು ನಿವಾರಿಸುವ ಉದ್ದೇಶದಿಂದ ಪಾರದರ್ಶಕ ಗಾಜಿನ ಸೇತುವೆಯನ್ನು ನಿರ್ಮಿಸಲಾಗಿದ್ದು, ಪ್ರವಾಸಿಗರೀಗ ಮಳೆಗಾಲದ ರೌದ್ರ ನೋಟವನ್ನೂ ಸ್ವಚ್ಛಂದವಾಗಿ ಕಣ್ತುಂಬಿಸಿಕೊಳ್ಳಬಹುದು. ಆಕರ್ಷಕ ಬಣ್ಣದ ಕಮಾನುಗಳನ್ನು ಹೊಂದಿರುವ ವಿಶಿಷ್ಟ ವಿನ್ಯಾಸದ ಈ ಸೇತುವೆಯಿಂದ ಮುಖ್ಯ ಜಲಪಾತದ ಜೊತೆಗೆ ಮೇಲ್ಭಾಗದಲ್ಲಿರುವ ಇತರ ಚಿಕ್ಕ ಜಲಪಾತಗಳನ್ನೂ ವೀಕ್ಷಿಸಬಹುದಾಗಿದೆ. ಸೇತುವೆಯ ಪ್ರವೇಶದ್ವಾರದಲ್ಲಿ ಕೃತಕ ಚಿಟ್ಟೆಯ ಕಲಾಕೃತಿಯನ್ನೂ, ಸಮೀಪದ ಬಂಡೆಗಳ ಮೇಲೆ ವನ್ಯಜೀವಿ ಮತ್ತು ಪಕ್ಷಿಗಳ ಚಿತ್ರಗಳನ್ನೂ ಮನಸೆಳೆಯುವಂತೆ ರಚಿಸಲಾಗಿದೆ.

ಮಹಾರಾಷ್ಟ್ರದ ಮಾಲ್ಡೀವ್ಸ್ ಎನಿಸಿರುವ ಕೊಂಕಣದ ಕಡಲತೀರಗಳಿಗೆ ಬರುವ ಪ್ರವಾಸಿಗರಿಗೆ ಇದು ಅಂತರರಾಷ್ಟ್ರೀಯ ಗುಣಮಟ್ಟದ ಪ್ರವಾಸಿ ಆಕರ್ಷಣೆಯಾಗಿಯೂ, ಸೆಲ್ಫಿ ಪಾಯಿಂಟ್ ಆಗಿಯೂ ಪ್ರಸಿದ್ಧಿ ಪಡೆಯುವ ಸಾಧ್ಯತೆಯಿದೆ.

—ರಮಣ್ ಶೆಟ್ಟಿ ರೆಂಜಾಳ, ಮುಂಬೈ





## ಬಂದರೋ ಬಂದರು ಭಾವ ಬಂದರು...

ಜೆ.ಪಿ. ತೂಮಿನಾಡ್‌ರ ಈ ವರ್ಷದ ಸೂಪರ್ ಹಿಟ್ ಚಲನಚಿತ್ರ 'ಸು ಫ್ರಮ್ ಸೋ'ದ ಪಾತ್ರಧಾರಿಗಳ ಪ್ರತಿಬಿಂಬವು ಗೊಂಬೆಗಳಾಗಿ ರೂಪುಗೊಂಡಿವೆ. ಇವು ಬೀದಿ ಬೀದಿಯಲ್ಲಿ ಕುಣಿದು ನೋಡುಗರಿಗೆ ಮುದ ನೀಡುತ್ತಿವೆ. ದಕ್ಷಿಣ ಕನ್ನಡದಲ್ಲಿ ಈ ಸಾರಿಯ ಗಣೇಶ ಚತುರ್ಥಿ, ದಸರಾ, ನವರಾತ್ರಿ ಮುಂತಾದ ಮೆರವಣಿಗೆಯಲ್ಲಿ ನೋಡುಗರ ಮನಸೂರೆಗೊಂಡವು. ಸಿನಿಮಾದ ಪಾತ್ರಧಾರಿಗಳು ಭಾವ, ಬಾನು, ಕರುಣಾಕರ, ಸತೀಶ್, ರವಿಯಣ್ಣರ ಅವರವರ ಪಾತ್ರದಂತೆ ವಸ್ತ್ರವಿನ್ಯಾಸ ಗಮನಸೆಳೆಯಿತು. ಇದೊಂದು ಕಲೆಯ ಹೊಸ ಆವಿಷ್ಕಾರವಾಗಿದೆ.

—ಗುರುದೇವ್ ಭಂಡಾರ್ಕರ್, ಹೊಸನಗರ